For more job news visit : www.kpscvaani.com

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ
ಕಲಬುರಗಿ-585102 (ಕರ್ನಾಟಕ ರಾಜ್ಯ)
Website: https://kkrtc.karnataka.gov.in

Kalyana Karnataka Road Transport Corporation
Central Offices, Behind Orchid Mall
Kalaburagi – 585102
(Karnataka State)

ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ನೇಮಕ/ನೇ-1/ಕ-461/2176 /2026-27 ದಿನಾಂಕ:21.07.2026

ಸಹಾಯಕ ಲೆಕ್ಕಿಗ ಹಾಗೂ ನಿರ್ವಾಹಕ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಕಾರ್ಯಸ್ಥಳ ಹಂಚಿಕೆ ಕುರಿತು ಸೂಚನೆ.

ಕಕರಸಾ ನಿಗಮದ ಸಹಾಯಕ ಲೆಕ್ಕಿಗ ಹಾಗೂ ನಿರ್ವಾಹಕ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಗಳಲ್ಲಿ ಸ್ಥಾನ ಪಡೆದ ಎಲ್ಲಾ ಅಭ್ಯರ್ಥಿಗಳಿಗೆ **ದಿನಾಂಕ: 28.07.2026 ರಂದು "ಕಕರಸಾ ನಿಗಮ, ಕೇಂದ್ರ ಕಚೇರಿ, ಕಲಬುರಗಿ"** ಇಲ್ಲಿ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಕಾರ್ಯಸ್ಥಳ ಹಂಚಿಕೆಗೆ ಕ್ರಮ ವಹಿಸಲಾಗುತ್ತಿದೆ.

ಆಯಾ ಹುದ್ದೆಯ ಎರಡೂ (ಸ್ಥಳೀಯ ಮತ್ತು ಉಳಿಕೆ ಮೂಲ) ವೃಂದಗಳಲ್ಲಿ ಆಯ್ಕೆಗೊಂಡಿರುವ ಎಲ್ಲಾ ಅಭ್ಯರ್ಥಿಗಳನ್ನು ಅವರ ಮೆರಿಟ್ ಇಳಿಕೆ ಕ್ರಮದಲ್ಲಿ ಪಟ್ಟಿ ಮಾಡಿ ಕೌನ್ಸೆಲಿಂಗ್ ಕ್ರಮಾಂಕವನ್ನು ನಿಗದಿ ಪಡಿಸಲಾಗುವುದು. ಸದರಿ ಕೌನ್ಸೆಲಿಂಗ್ ಕ್ರಮಾಂಕದ ಅನುಸಾರ ಅಭ್ಯರ್ಥಿಗಳಿಗೆ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಕಾರ್ಯಸ್ಥಳ ಹಂಚಿಕೆ ಮಾಡಲಾಗುವುದು.

ಪ್ರಕ್ರಿಯು ಸಂಪೂರ್ಣ ಗಣಕೀಕೃತವಾಗಿರುವುದರಿಂದ, ಕಾರ್ಯಸ್ಥಳ ಬದಲಾವಣೆ ಕುರಿತಾದ ಕೋರಿಕೆ ಅಥವಾ ಶಿಫಾರಸ್ಸುಗಳಿಗೆ ಅವಕಾಶವಿರುವುದಿಲ್ಲ.

ಈ ಸಂಬಂಧ ಅಭ್ಯರ್ಥಿಗಳು, ದಾಖಲಾತಿ ಪರಿಶೀಲನೆಯ ನಂತರ ಅಭ್ಯರ್ಥಿಗಳಿಗೆ ನೀಡಲಾದ **ಮೂಲ ಪರಿಶೀಲನಾ ವರದಿ**ಯೊಂದಿಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ಗೈರು ಹಾಜರಾಗುವ ಅಭ್ಯರ್ಥಿಗಳಿಗೆ ಕೌನ್ಸೆಲಿಂಗ್ ನ ಕೊನೆಯಲ್ಲಿ ಉಳಿಯುವ ಖಾಲಿ ಸ್ಥಾನಗಳಿಗೆ ನಿಗಮದಿಂದಲೇ ಯಾದೃಚ್ಛಿಕವಾಗಿ (Randomly) ಕಾರ್ಯಸ್ಥಾನದ ಹಂಚಿಕೆ ಮಾಡಲಾಗುವುದು.

ಈ ಸಂಬಂಧ ಯಾವುದೇ ಪ್ರತ್ಯೇಕ ಪತ್ರ ವ್ಯವಹಾರ ಮಾಡಲಾಗುವುದಿಲ್ಲ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು